7. ಗಮನ ಸೆಳೆಯುವ ಸೂಚನೆಗಳು

(i) ವಿಷಯ: ಸುಳ್ಯ ವಿಧಾನಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕಾಗ್ತೆಯೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಬೆಳಂದೂರಿಗೆ ಸ್ಥಳಾಂತರಿಸಿರುವುದರಿಂದ ಕಾಣಿಯೂರಿನ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗಿರುವ ಬಗ್ಗೆ.

ಶ್ರೀ ಎಸ್. ಅಂಗಾರ (ಸುಳ್ಯ): ಮಾನ್ಯ ಅಧ್ಯಕ್ಷರೆ, ನನ್ನ ಸುಳ್ಯ ವಿಧಾನಸಭಾ ಕ್ಷೇತ್ರದ ಕಾಗ್ತೆಯೂರು ಸರ್ಕಾರಿ ಪ್ರಥಮದರ್ಜೆ ಕಾಲೇಜು 2000ರಲ್ಲಿ ಮಂಜೂರಾಗಿ ಅಲ್ಲಿಂದ ಇಲ್ಲಿಯವರೆಗೆ ಅಲ್ಲಿ ಕಾರ್ಯನಿರ್ವಹಿಸುತ್ತಿದೆ. ಆದರೆ ನನ್ನ ಗಮನಕ್ಕೆ ಬರದೆ ಏಕಾಏಕಿಯಾಗಿ ಕಾಣಿಯೂರಿನಿಂದ ಬೆಳಂದೂರಿಗೆ ಸ್ಥಳಾಂತರಿಸುವ ಆದೇಶವಾಗಿದೆ. ಇದರಿಂದಾಗಿ ಅಲ್ಲಿ ಎಲ್ಲಾ ಸಾರ್ವಜನಿಕರಲ್ಲಿ, ವಿವಿಧ ಸಂಘಟನೆಗಳಲ್ಲಿ ಗೊಂದಲವುಂಟಾಗಿದೆ. ಅದನ್ನು ಕಾಣಿಯೂರಿನಲ್ಲೆ ಉಳಿಸಿಕೊಡಬೇಕು, ಏಕೆಂದರೆ ಸಭೆ ಆಗಿ ಆದೇಶವೂ ಆಗಿದೆ. ಈಗ ಬೆಳಂದೂರಿನಲ್ಲಿ ಕೇವಲ 12 ಮಕ್ಕಳಿದ್ದಾರೆ, ಕಾಣಿಯೂರಿನಲ್ಲಿ 132 ಮಕ್ಕಳಿದ್ದಾರೆ, ಎರಡೂ ಕಡೆ ಕ್ಲಾಸ್ ಆಗುವುದಿಲ್ಲ. ಇದರಿಂದ ದೊಡ್ಡ ಸಮಸ್ಯೆಯಾಗಿದೆ, ಈ ಬಗ್ಗೆ ಸಂಬಂಧಪಟ್ಟ ಸಚಿವರು ಹೇಳಬೇಕು. ಮತ್ತು ಕಾಣಿಯೂರಿನಲ್ಲಿ ಮಕ್ಕಳ ಭವಿಷ್ಯ ಹಾಳಾಗುತ್ತಿದೆ. ಎರಡನೆಯದಾಗಿ ಇದು ನನ್ನ ಹಕ್ಕಿನ ಪ್ರಶ್ನೆ, ಇದನ್ನು ಸಚಿವರ ಗಮನಕ್ಕೆ ತಂದಿದ್ದೆ. ಅಲ್ಲಿ ಶಾಲಾ ಅಭಿವೃದ್ಧಿ ಸಮಿತಿಯ ಇಬ್ಬರು ಸದಸ್ಯರು ಸೇರಿಕೊಂಡು, ಒಂದು bogus letter head ಮಾಡಿ seal ಮಾಡಿ ಬೋಗಸ್ ಶಾಲಾಭಿವೃದ್ಧಿ ಸಮಿತಿ ಎಂದು ರಚನೆ ಮಾಡಿಕೊಮಡು ಸಂಬಂಧಪಟ್ಟವರಿಗೆ ಅವರು ಕೊಟ್ಟಿದ್ದಾರೆ, ಈ ರೀತಿ ಅಲ್ಲಿ ಅನ್ಯಾಯವಾಗಿದೆ, ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ: ಈಗ ಲಿಖಿತ ಉತ್ತರ ತಮ್ಮ ಕೈಯಲ್ಲಿದೆ, ಕಾಣಿಯೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ಸನ್ಮಾನ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದಾಗ ದಿನಾಂಕ: 26.06.2014 ರಂದು ತಾವು ಸುಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲ್ಲೂಕಿನ ಕಾಣಿಯೂರಿನಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಬೆಳಂದೂರಿಗೆ ಸ್ಥಳಾಂತರ

ಮಾಡಿ ಪ್ರಭಾರ ಪ್ರಾಂಶುಪಾಲರನ್ನು ನೇಮಕ ಮಾಡಿರುವ ಹಿನ್ನೆಲೆಯಲ್ಲಿ ಕಾಣಿಯೂರಿನ ಶಿಕ್ಷಕರು ಬೆಳಂದೂರಿನ ಕಾಲೇಜಿನಲ್ಲಿ ಚಾರ್ಜ್ ತೆಗೆದುಕೊಂಡಿರುತ್ತಾರೆ. ಇದರಿಂದ ಕಾಣಿಯೂರಿನಲ್ಲಿರುವ ವಿದ್ಯಾರ್ಥಿಗಳು ಪಾಠ ಪ್ರವಚನಗಳಲ್ಲದೇ ತೊಂದರೆ ಅನುಭವಿಸುತ್ತಿದ್ದಾರೆ. ಬೆಳಂದೂರಿನಲ್ಲಿ ಕೇವಲ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳು ಮಾತ್ರವೇ ಇದ್ದು ಕಾಣಿಯೂರಿನಲ್ಲಿ 130ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿರುವ ಕಾರಣ ಹಾಗೂ ಬೆಳಂದೂರಿನ ತಾತ್ಕಾಲಿಕ ಶೆಡ್‌ನಲ್ಲಿ ಯಾವುದೇ ಶೈಕ್ಷಣಿಕ ಚಟುವಟಿಕೆ ನಡೆಸಲು ಸೂಕ್ತವಲ್ಲದ ಕಾರಣ ಕಾಣಿಯೂರಿನ ಕಾಲೇಜು ಯಥಾಸ್ಥಿತಿಯಲ್ಲಿ ಮುಂದುವರೆಸಬೇಕಾಗುವ ಕುರಿತು ಸದನದಲ್ಲಿ ಪ್ರಸ್ತಾಪಿಸಿರುವ ಬಗ್ಗೆ ಹೇಳಿದ್ದಾರೆ.

ಕಾಣಿಯೂರು ಪ್ರಥಮ ದರ್ಜೆ ಕಾಲೇಜನ್ನು ಬೆಳಂದೂರಿಗೆ ಸ್ಥಳಾಂತರಿಸಿ ಆದೇಶ ಹೊರಡಿಸಿರುವ ಕುರಿತು ದಿನಾಂಕ: 26.06.2014ರಂದು ಕಾಲೇಜನ್ನು ಬೆಳಂದೂರಿಗೆ ಸ್ಥಳಾಂತರಿಸುವ ಬಗ್ಗೆ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು, ಮಾನ್ಯ ನಗರಾಭಿವೃದ್ಧಿ ಸಚಿವರು, ಮಾನ್ಯ ಯುವಜನ ಸೇವೆ ಮತ್ತು ಮೀನುಗಾರಿಕೆ ಸಚಿವರು, ಮಾನ್ಯ ಸುಳ್ಯ ವಿಧಾನಸಭಾ ಕ್ಷೇತ್ರದ ಶಾಸಕರು, ಮಾನ್ಯ ಪುತ್ತೂರು ವಿಧಾನಸಭಾ ಕ್ಷೇತ್ರದ ಶಾಸಕರು, ಇಲಾಖಾ ಅಧಿಕಾರಿಗಳು ಮತ್ತು ಸಂಬಂಧಿತ ಜನಪ್ರತಿನಿಧಿಗಳು ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ ಸುಧೀರ್ಘವಾಗಿ ಚರ್ಚಿಸಿ ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದು ಅದರಂತೆ ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ. ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಜಿಲ್ಲಾ ಸಚಿವರು, ನಗರಾಭಿವೃದ್ಧಿ ಸಚಿವರು, ಯುವಜನ ಸಚಿವರು ನಮ್ಮ ಪುತ್ತೂರು ಶಾಸಕರ ಜೊತೆ ಚರ್ಚೆ ಮಾಡಿ ಆ ದಿವಸ ನಾವು ಕೆಲವು ನಿರ್ಣಯವನ್ನು ಮಾಡಿದ್ದೇವೆ. ಆ ನಿರ್ಣಯದ ಪ್ರಕಾರ ತಾವು ಎರಡು ದಿವಸ ಸಮಯ ಕೊಡಿ ಎಂದು ಹೇಳಿದಿರಿ, ತಾವು ನನಗೆ ಬಂದು ಹೇಳಲಿಲ್ಲ, ನಿನ್ನೆ ದಿವಸ ಬಂದು ನನಗೆ ಪತ್ರ ಕೊಟ್ಟಿರಿ, ಎರಡನೆಯದಾಗಿ, ತಮ್ಮ ಸಲಹೆಯಂತೆ ಆ ಕಾಲೇಜು ಈಗಾಗಲೇ ಬೆಳಂದೂರಿಗೆ ಸ್ಥಳಾಂತರಿಸಲು ಆದೇಶವಾಗಿದೆ. ತಮಗೆ ಗೊತ್ತು,

ಇದಕ್ಕೆ ಯುಜಿಸಿ ಯಿಂದ ಇದಕ್ಕೆ ಹಣ ಬಂತು. ಕಳೆದ ಒಂದೂ ಕಾಲು ವರ್ಷ ಹಿಂದೆ ನಮ್ಮ ಸರ್ಕಾರ ಬಂತು, ಅದಕ್ಕಿಂತ ಮುಂಚೆ ಹಿಂದಿನ ಸರ್ಕಾರವಿತ್ತು. ಅಲ್ಲಿ ಜಾಗ ಪಡೆದುಕೊಳ್ಳಲು ಪ್ರಯತ್ನ ಮಾಡಿದರೂ ವಿಫಲವಾದೆವು. ಹಾಗಾಗಿ ಅಲ್ಲಿ ಜಾಗ ಸಿಕ್ಕಿಲ್ಲವೆಂದು ಹೇಳಿದ ಮೇಲೆ ಇಲ್ಲೇ ಜಾಗ ಸಿಗುತ್ತ ದೆಂದು ಇಲ್ಲಿಗೆ ನಾವು ಸ್ಥಳಾಂತರಿಸಿದ್ದೇವೆ. ಎರಡೂ ನಿಮ್ಮ ಕ್ಷೇತ್ರದಲ್ಲೇ ಬರು ತ್ತವೆ, ಯುಜಿಸಿ ಹಣ ವಾಪಸ್ ಹೋಯಿತು. 1 ಕೋಟಿ 23 ಲಕ್ಷ ನಬಾರ್ಡ ಹಣವಿದೆ, ಇಲ್ಲಿ ಜಾಗವಿದೆ, ಇಲ್ಲಿ ಕಟ್ಟಡ ಕಟ್ಟಿ ಮಕ್ಕಳಿಗೆ ಒಳ್ಳೆಯ ಮೂಲ ಭೂತ ಸೌಕರ್ಯ ನಿರ್ಮಾಣ ಮಾಡುವುದರಿಂದ ಒಳ್ಳೆಯದಾಗುತ್ತದೆನ್ನುವ ಒಳ್ಳೆಯ ಉದ್ದೇಶದಿಂದ ಇಲ್ಲಿಗೆ ಸ್ಥಳಾಂತರಿಸಿದ್ದೇವೆ. ತಮ್ಮ ಸಲಹೆ ಪ್ರಕಾರ ಕಾಣಿಯೂರು ಸರ್ಕಾರಿ ಕಾಲೇಜ್ ಎಂದೇ ಅದಕ್ಕೆ ಹೆಸರು ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಡೆವಲಪ್‌ಮೆಂಟ್ ಕಮಿಟಿಯನ್ನು ನಿಮ್ಮ ಅಧ್ಯಕ್ಷತೆ ಯಲ್ಲಿಯೇ ಮಾಡಿದ್ದೇವೆ. ಮತ್ತೊಂದೇನು ಆ ಡೆವಲಪ್‌ಮೆಂಟ್ ಕಮಿಟಿ ಯದ್ದು ಸರಿಯಲ್ಲ ಎಂದು ಆ ದಿನ ನಿಮಗೆ ಹೇಳಿ ಪ್ರೋಸಿಡಿಂಗ್ಸ್‌ನ್ನು ಹಾಕಿದ್ದೇನೆ. ತಮ್ಮದೇ ಕ್ಷೇತ್ರವಿದ್ದು, ತಾವು ಸಹರಿಸಬೇಕು. ನೋಡಿ, ultimately ಕಾಲೇಜುಗಳು ಪವಿತ್ರವಾದ ಸ್ಥಳಗಳು. ಅಲ್ಲಿ ರಾಜಕೀಯ ಮಾಡುವ ಸದಿಚ್ಛೆ ನಮಗೂ ಇಲ್ಲ, ಯಾರಿಗೂ ಇಲ್ಲ, ತಮಗೂ ಇಲ್ಲವೆಂದು ನನಗೆ ಗೊತ್ತು. ಹೀಗಾಗಿ ತಾವು ಸಹರಿಸಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ: ಎಲ್ಲಾ ಮೆಂಬರ್‌ಗಳನ್ನು ಒಬ್ಬೊಬ್ಬರನ್ನು ಕಾಂಗ್ರೆಸ್‌ನವರನ್ನು ಹಾಕಿಬಿಟ್ಟು ರಾಜಕೀಯ ಮಾಡಬೇಡಿ ಎನ್ನುತ್ತೀರಿ. ಎಂ.ಎಲ್.ಎ. ಯನ್ನು ಅಧ್ಯಕ್ಷರನ್ನು ಮಾಡಿ ಸ್ಕೂಲ್ ಕಮಿಟಿಗೂ ನೀವು ರಾಜಕಾರಣ ಪ್ರೇರಿತ ಮಾಡಿದರೆ ಹೇಗೆ? ನೀವು ಹಿರಿಯ ನಾಯಕರು ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ: ಕಮಿಟಿ ಛೇರ್ಮನ್ ನೀವೇ.

ಶೀ ಎನ್. ಚಲುವರಾಯಸ್ವಾಮಿ: ಛೇರ್ಮನ್ ನಾವಿದ್ದೇವೆ. ಅದೊಂದು ದೊಡ್ಡದೇ, ಅಲ್ಲೇನೂ ಕೊಳ್ಳೆ ಹೊಡೆಯುವುದಿದೆಯೆ? ಅಧ್ಯಕ್ಷರನ್ನು ನೀವು ಅವರಿಗೆ ಕೊಟ್ಟುಬಿಡಿ.

(ಗೊಂದಲ)

ಅಧ್ಯಕ್ಷರು: ಈ ರೀತಿ ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ? ನೀವು ಈ ವಿಷಯವನ್ನು ಚರ್ಚೆ ಮಾಡಲು ಬೇರೆ ರೂಪದಲ್ಲಿ ತನ್ನಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಬೆಳಂದೂರಿನಲ್ಲಿ ಸದ್ಯಕ್ಕೆ ಟೆಂಪರರಿ ಇದೆ. ಇಲ್ಲಿ ಕಾಣಿಯೂರಿನದು ಈಗ ನಡೆಯುತ್ತಿದೆ. ಇಲ್ಲೇ 132 ವಿದ್ಯಾರ್ಥಿಗಳಿದ್ದಾರೆ. ಅಲ್ಲಿ ಕೇವಲ 7 ರಿಂದ 8 ವಿದ್ಯಾರ್ಥಿಗಳು ಅಲ್ಲಿಗೆ ಹೋಗಿದ್ದಾರೆ. ನೀವೆಲ್ಲಾ ಆರ್ಡರ್ ಮಾಡಿದ ಮೇಲೆ ಹೋಗಿದ್ದಾರೆ. ಅಲ್ಲಿ ಹೊಸ ಜಾಗದಲ್ಲಿ ಕಟ್ಟುತ್ತೇವೆನ್ನುತ್ತೀರಿ. ಆವತ್ತೇನು ಮಾತನಾಡಿದ್ದೇವೆ, ಕಟ್ಟಿದ ಮೇಲೆ ನೀವು ಶಿಫ್ಟ್ ಮಾಡಿ. ಅಲ್ಲಿಯವರೆಗೂ ಕಾಣಿಯೂರಿನಲ್ಲಿ ಇರಲಿ, ಸದ್ಯಕ್ಕೆ ಕಾಣಿಯೂರಿನಲ್ಲಿ ನಡೆಸಿ, ಈಗಲೇ ಶಿಫ್ಟ್ ಮಾಡುವುದಕ್ಕೆ ಹೋದರೆ ಸ್ಟಾರ್ಟ್ ಕ್ಲಾಶ್ ಆ ಊರಿಗೆ ಈ ಊರಿಗೆ ಆಗುತ್ತದೆ. ಹೀಗೇಕೆ ಮಾಡುತ್ತೀರಿ? ಕಾಣಿಯೂರಿನಲ್ಲಿ ಸದ್ಯಕ್ಕೆ ನಡೆಸಿ, ಬೆಳಂದೂರಿನಲ್ಲಿ ರುವುದು ಟೆಂಪರರಿ, ಆ ಜಾಗ ಕೂಡ ಸರಿಯಿಲ್ಲ. ಶೆಡ್‌ನಲ್ಲಿ ನಡೆಯುತ್ತಿದೆ.

ಶ್ರೀ ಆರ್. ವಿ. ದೇಶಪಾಂಡೆ: ತಾವು ಆ ದಿನ ಆ ಸಲಹೆಯನ್ನು ಕೊಟ್ಟಿರಿ. ಈಗ ಪ್ರಮಾಣಿಕವಾಗಿ ಹೇಳಬೇಕೆಂದರೆ ಕಾಣಿಯೂರಿನಲ್ಲಿರುವ ಜಾಗವು ಸರಿಯಿಲ್ಲ. ಅದೂ ಕೂಡ ಪ್ರೈವೇಟ್ ಬಿಲ್ಡಿಂಗ್. ಅದೂ ಸರಿಯಿಲ್ಲ.

(ಗೊಂದಲ)

ಶ್ರೀ ಜಗದಿಶ್ ಶೆಟ್ಟರ್: ಹೊಸ ಬಿಲ್ಡಿಂಗ್ ಆದಮೇಲೆ ಎಲ್ಲರನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ.

ಶ್ರೀ ಸಿ. ಟಿ. ರವಿ: ಕಾಣಿಯೂರಿನಲ್ಲಿ ಮಠದವರು ಒಂದು ಜಾಗವನ್ನು ಕೊಟ್ಟಿದ್ದಾರೆ.

ಶ್ರೀ ಎಸ್. ಅಂಗಾರ: ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದೆ. ಬೆಳಂದೂರಿನಲ್ಲಿ ತಾತ್ಕಾಲಿಕವಾದಂಥ ಸಿಮೆಂಟ್ ಶೀಟ್‌ನ ಶೆಟ್ ಹಾಕಿ ಕ್ಲಾಸ್ ಪ್ರಾರಂಭ ಮಾಡಿದಾಗ 12 ಮಕ್ಕಳಿದ್ದರು. ಕಾಣಿಯೂರಿನಲ್ಲಿ ಕಳೆದ ಐದು ವರ್ಷದಿಂದ ಕಾಲೇಜ್ ನಡೆಯುತ್ತಿದೆ. ಅಲ್ಲಿ 132 ಮಕ್ಕಳಿದ್ದಾರೆ. ಒಟ್ಟು 150 ಮಕ್ಕಳಿರುವುದು, ಅದರಲ್ಲಿ 132 ಮಕ್ಕಳು ಕಾಣಿಯೂರಿನಲ್ಲಿದ್ದಾರೆ, 12 ಮಕ್ಕಳು ಬೆಳಂದೂರಿನಲ್ಲಿದ್ದಾರೆ. ಈಗ ಅಲ್ಲಿ ಕೂಡ ಏನೂ ಕೆಲಸವಾಗಲಿಲ್ಲ. 27ನೇ ತಾರೀಖು ಮತ್ತು 7ನೇ ತಾರೀಖು ಎರಡು ಮೀಟಿಂಗ್ ಆಗಿದೆ. ಕಾಣಿಯೂರು ಗ್ರಾಮದವರು ಬಂದಿದ್ದರು. ಆ ಸಭೆಯಲ್ಲಿ ಭಾರಿ ವಿರೋಧ ಬಂತು. ವಿರೋಧ ಬಂದ ನಂತರ ಕಾಣಿಯೂರು ಮಠಕ್ಕೆ ಹೋದಾಗ ಅಲ್ಲಿ ಅವರನ್ನು ರಿಕ್ವೆಸ್ಟ್ ಮಾಡಿಕೊಂಡಾಗ ಕಾಣಿಯೂರು ಮಠದ ಸ್ವಾಮೀಜಿಗಳು 10 ಎಕರೆ ಜಾಗವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಹೀಗಿರುವಾಗ ನಾನು ಇಷ್ಟೇ ಹೇಳುವುದು, ಮಾನ್ಯ ಸಚಿವರು ತಕ್ಷಣ ಬೆಳಂದೂರಿನಲ್ಲಿ ನಡೆಯುವುದು ಬೇಡ. ಕಾಣಿಯೂರಿನಲ್ಲಿ ಕಾಲೇಜ್ ನಡೆಸುತ್ತೇವೆಂದು ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ: ಸ್ವಾಮಿಜಿಯವರು ನಾಲ್ಕೈದು ದಿವಸಗಳ ಹಿಂದೆ ಉಡುಪಿ ಮಠದಲ್ಲಿ ನನ್ನ ಕಂಡು ಮಾತನಾಡಿದರು. ಪೂಜ್ಯ ಗುರುಗಳು ಒಂದೂವರೆ ವರ್ಷದ ಹಿಂದೆ ಅಥವಾ ಎರಡು ವರ್ಷದ ಹಿಂದೆ ಆ ಜಾಗವನ್ನು ಕೊಟ್ಟಿದ್ದರೆ ಇವತ್ತು ಆ ಪರಿಸ್ಥಿತಿ ಬರುತ್ತಿರಲಿಲ್ಲ. ನಿಮ್ಮ ಸರ್ಕಾರ ವಿದ್ದಾಗಲೂ ಸಾಕಷ್ಟು ಪ್ರಯತ್ನ ಮಾಡಿದ್ದೀರಿ. ಯು.ಜಿ.ಸಿ. ಯಿಂದ ಹಣವನ್ನು ತಂದಿರಿ. ಜಾಗವನ್ನು ಅಲ್ಲಿಯೇ ಗುರುತಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಏನಾದರೂ ಟ್ರಾನ್ಸಫರ್ ಮಾಡುವ ಮನಸ್ಸಿದ್ದರೆ ಒಂದು ವರ್ಷದ ಹಿಂದೆಯೇ ಮಾಡುತ್ತಿದ್ದೆವು. ಈಗಾಗಲೇ ಒಂದೂಕಾಲು ವರ್ಷವಾಗಿದೆ. ಈಗೇನಾಗಿದೆ ಎಂದರೆ ಅಲ್ಲಿ ಕಾಣಿಯೂರಿನಲ್ಲಿ college lock ಮಾಡಿದ್ದಾರೆ.

ಶ್ರೀ ಸಿ. ಟಿ. ರವಿ: ಮಕ್ಕಳಿರುವ ಕಡೆ ಕಾಲೇಜ್ ಕೊಡಬೇಕು. 132 ಮಕ್ಕಳಿರುವ ಕಡೆ ಕಾಲೇಜ್ ಕೊಡಬೇಕೋ ಅಥವಾ 13 ಮಕ್ಕಳಿರುವ ಕಡೆ ಕಾಲೇಜ್ ಕೊಡಬೇಕೋ?

ಅಧ್ಯಕ್ಷರು: ನೀವು ಹೇಳಬೇಕಾದ್ದೆಲ್ಲವನ್ನು ಹೇಳಿದ್ದೀರಿ. ಸರ್ಕಾರದವರು ಹೇಳಿದ್ದಾರೆ. ಮತ್ತೆ ಹಠ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಸಿ. ಟಿ. ರವಿ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಹಠದ ಪ್ರಶ್ನೆಯಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಈಗ ಕಾಣಿಯೂರಿನಲ್ಲಿ ನಡೆಸಿ. 132 students ಇದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ: ತಾವು ಶಾಸಕರಿದ್ದೀರಿ. ಎರಡೂ ಸ್ಥಳಗಳು ನಿಮ್ಮ ಕ್ಷೇತ್ರದಲ್ಲಿಯೇ ಬರುತ್ತದೆ. ಕಾಲೇಜ್ ಏನೂ ಬೇರೆ ಕ್ಷೇತ್ರಕ್ಕೆ ಹೋಗಿಲ್ಲ. ಇವರ ಕ್ಷೇತ್ರಕ್ಕೆ ಹೋಗಿರುವುದು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನೀವೇ ನ್ಯಾಯ ಕೊಡಿಸಬೇಕು. ಈ ಸದನಕ್ಕೆ ಅವರೊಬ್ಬ ಹಿರಿಯ ಶಾಸಕರು. ಈಗ ಇರುವ ಕಡೆಯಲ್ಲಿಯೇ ಕಾಲೇಜ್ ನಡೆಯಲಿ. ಈಗ ಅಲ್ಲೇನಾಗಿದೆ. ಸ್ಥಳಾಂತರ ಮಾಡಿರುವ ಜಾಗದಲ್ಲಿ ಶೆಡ್‌ನಲ್ಲಿ ನಡೆಸುತ್ತಿರುವುದು. ಅಲ್ಲಿ ಕಾಲೇಜ್‌ನ್ನು ಸರಿಯಾಗಿ ನಡೆಸುವುದಕ್ಕೂ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಅದೂ ಟೆಂಪರರಿ. ಆದುದರಿಂದ ಕಾಣಿಯೂರಿನಲ್ಲಿಯೇ ನಡೆಸಿ.

ಶ್ರೀ ವಿ. ಸುನೀಲ್ ಕುಮಾರ್: ದೇಶಪಾಂಡೆಯವರು ಇದನ್ನು ಇಷ್ಟು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು. ಕಾಣಿಯೂರಿನಲ್ಲಿಯೇ ಕಾಲೇಜ್ ನಡೆಸುತ್ತೇವೆಂದು ಹೇಳಿಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗ ಒಂದೇ ಒಂದು ಕೆಲಸ ಮಾಡಬೇಕು. ಏನೆಂದರೆ, ದೇಶಪಾಂಡೆಯವರು ಅವರ ಸಚಿವರನ್ನು ಸ್ವಲ್ಪ ಸಮಾಧಾನಗೊಳಿಸಬೇಕಷ್ಟೆ.

ಶ್ರೀ ಎಸ್. ಅಂಗಾರ: ಮತ್ತೆ ಅಲ್ಲಿ ಕಾಲೇಜ್‌ನ ವಿಚಾರದಲ್ಲಿ status quo maintain ಮಾಡಬೇಕು.

ಶ್ರೀ ಆರ್. ಬಿ. ದೇಶಪಾಂಡೆ: Status quo ಏತಕ್ಕೆ? ಈಗಾಗಲೇ ಕಾಲೇಜ್ ಶಿಫ್ಟ್ ಆಗಿದೆ. ಈಗಾಗಲೇ ಕಾಲೇಜ್ ಪ್ರಾರಂಭವಾಗಿದೆ.

ಶ್ರೀ ಜಗದೀಶ್ ಶೆಟ್ಟರ್: Technicıally ಮಾತನಾಡುವುದು ಬೇಡ.

(ಗೊಂದಲ)

ಅಧ್ಯಕ್ಷರು: ಅವರ ಸಚಿವ ಸಂಪುಟದ ಸದಸ್ಯರೇ ತಯಾರಿಲ್ಲವೆನ್ನುತ್ತಾರಲ್ಲ. ಏನು ಮಾಡುವುದು?

ಶ್ರೀ ಜಗದೀಶ್ ಶೆಟ್ಟರ್: ಇದು small issue. ಇದನ್ನು ಸುಮ್ಮನೇ prestige ಮಾಡಿಕೊಂಡಿದ್ದಾರೆ.

ಶ್ರೀ ಸಿ. ಟಿ. ರವಿ: ಮಾನ್ಯ ಅಂಗಾರವರು ಐದನೇ ಬಾರಿ ಶಾಸಕರಾಗಿದ್ದಾರೆ. ಅವರು ಡಿಮ್ಯಾಂಡ್ ಮಾಡಿ ತೆಗೆದುಕೊಂಡ college, ಅದರಲ್ಲಿ change ಮಾಡುವುದಕ್ಕೆ ಇವರಿಗೆ ಹಠವೇಕೆ? ಯಾರೋ ಒಬ್ಬರು ತಾಲ್ಲೂಕು ಅಭಿವೃದ್ಧಿ ಹೆಸರಿನಲ್ಲಿ. . . . .

ಅಧ್ಯಕ್ಷರು: ಈಗ ಒಂದು ಕೆಲಸ ಮಾಡೋಣ. ಇದನ್ನು ಬೇರೆ ರೂಪದಲ್ಲಿ ನಾಳೆ ಚರ್ಚೆ ಮಾಡಿ.

ಶ್ರೀ ಸಿ. ಟಿ. ರವಿ: ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಶಾಸಕರಾಗಿದ್ದಾರೆ. ಇವರ ಹೆಸರಿನಲ್ಲಿ ಬೇರೆಯವರು ಬೋಗಸ್ ಸಹಿ ಮಾಡಿ ಇನ್ಯಾರೋ ಒಬ್ಬ ರೆಕಮೆಂಟ್ ಮಾಡಿ ನಿರ್ಣಯ ಮಾಡಿ ಕಳುಹಿಸಿದರೆ ಇವರು ಒಪ್ಪಿಕೊಳ್ಳುತ್ತಾರೆ ಸಚಿವರು. ಬೋಗಸ್ ಸಹಿ ಮಾಡಿದವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ. ಕಾಲೇಜು ಅಭಿವೃದ್ಧಿ ಬೇರೆಯವನು ಒಬ್ಬ ಹೋಗಿ ರೆಕಮೆಂಟ್ ಮಾಡಿದ್ದಾನೆ.

ಅಧ್ಯಕ್ಷರು: ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್: ಕಳೆದ ಒಂದು ತಿಂಗಳಿಂದ ಅಲ್ಲಿ ಪ್ರತಿಭಟನೆ ನಡೆಯುತ್ತಿದೆ, 132 ಮಕ್ಕಳು ರಸ್ತೆ ಮೇಲಿದ್ದಾರೆ.

(ಗೊಂದಲ)

ಶ್ರೀ ಸಿ. ಟಿ. ರವಿ: ಮಕ್ಕಳ ಭವಿಷ್ಯ ಮುಖ್ಯವಾಗಬೇಕೋ ಅಥವಾ ಇವರ ರಾಜಕೀಯ ಪ್ರತಿಷ್ಠೆ ಮುಖ್ಯವಾಗಬೇಕೋ. ಮಕ್ಕಳ ಭವಿಷ್ಯ ಮುಖ್ಯವಾಗಬೇಕು ಎನ್ನುವುದಾದರೆ 132 ಮಕ್ಕಳಿರುವ ಜಾಗದಲ್ಲಿ ಕಾಲೇಜ್ ಸ್ಟಾರ್ಟ್ ಮಾಡಿ.

ಶ್ರೀ ಆರ್. ವಿ. ದೇಶಪಾಂಡೆ: ರವಿಯವರೆ, ನಾನು ಈ ಮಟ್ಟಕ್ಕೆ ಹೋಗಿ ರಾಜಕೀಯ ಮಾಡುವುದಕ್ಕೆ ಹೋಗುವವನಲ್ಲ. ಇನ್ನು ಎರಡನೆಯ ದಾಗಿ, ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆಯಿರುವುದರಿಂದಲೇ ನಾವೆಲ್ಲರೂ ಪ್ರಯತ್ನ ಮಾಡಿದ್ದು.

ಶ್ರೀ ಸಿ. ಟಿ. ರವಿ: ನಿಮ್ಮಿಂದ ತಪ್ಪಾಗಿಲ್ಲ ಈಗ fraud ಮಾಡಿದವನು ಯಾರು? ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಶಾಸಕರು. ಇವರ ಹೆಸರಿನಲ್ಲಿ ಇನ್ಯಾರೋ fraud ಮಾಡುತ್ತಾನೆಂದರೆ ಅವರ ನಿರ್ಣಯಕ್ಕೆ ಶಿಫ್ಟ್ ಮಾಡುತ್ತಾರೆಂದರೆ, ಅದು ಹೇಗೆ ಶಿಫ್ಟ್ ಮಾಡುತ್ತಾರೆ? ಮಾನ್ಯ ಅಧ್ಯಕ್ಷರೆ, ತಾವು ಶಾಸಕರ ರಕ್ಷಣೆಗೆ ಬರಬೇಕು.

ಅಧ್ಯಕ್ಷರು: ಓ. ಕೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಸಚಿವರೆ, ತಾವು ಈಗಾಗಲೇ ವಿರೋಧ ಪಕ್ಷದ ನಾಯಕರನ್ನು ಕರೆದು ಸಭೆಯನ್ನು ಮಾಡಿದ್ದೀರಿ, ಪ್ರಯತ್ನವನ್ನು ಕೂಡ ಮುಂದುವರೆಸಿದ್ದೀರಿ.

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್: ಮಾನ್ಯ ಸಚಿವರೆ, 132 ವಿದ್ಯಾರ್ಥಿಗಳು ಎಲ್ಲಿಗೆ ಹೋಗಬೇಕೆಂದು ಹೇಳಿಬಿಡಿ. ನೀವು ಉನ್ನತ ಶಿಕ್ಷಣ ಸಚಿವರು. ನಿಮ್ಮದೇ ಇಲಾಖೆ, ಅಲ್ಲಿ 132 ವಿದ್ಯಾರ್ಥಿಗಳು ಪ್ರತಿಭಟನೆ ಮಾಡುತ್ತಿದ್ದಾರೆ. ಅವರು ಎಲ್ಲಿಗೆ ಹೋಗಬೇಕು?

(ಗೊಂದಲ)

ಅಧ್ಯಕ್ಷರು: ನೋಡಿ ಈ ವಿಚಾರದಲ್ಲಿ ನಾನು ಅವರನ್ನು ಬಲಾತ್ಕಾರ ಮಾಡುವುದಕ್ಕಾಗುವುದಿಲ್ಲ. ನೀವು ಅವರನ್ನು convince ಮಾಡಬೇಕೆಂದಿದ್ದರೆ ಬೇರೆ ರೂಪದಲ್ಲಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಿ. ಇನ್ನೊಂದು ಸಾರಿ ಸಾಧಕ ಬಾಧಕಗಳ ಬಗ್ಗೆ ಚರ್ಚೆ ಮಾಡಿ.

ಶ್ರೀ ಸಿ. ಟಿ. ರವಿ: ಮಾನ್ಯ ಅಧ್ಯಕ್ಷರೆ, ಇದೊಂದು ಸಿಂಪಲ್ ವಿಚಾರ. ನೀವು ಯಾವ ಯಾವುದಕ್ಕೋ ನ್ಯಾಯ ಕೊಡಿಸಿದ್ದೀರಿ. ಇದೊಂದು ಸಿಂಪಲ್ ವಿಚಾರ. ಇದಕ್ಕೆ ನೀವು ನ್ಯಾಯ ಕೊಡಿಸಬೇಕು.

ಶ್ರೀ ವಿ. ಸುನೀಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ನೀವೇ ಒಂದು ಆದೇಶ ಮಾಡಿಬಿಡಿ.

ಅಧ್ಯಕ್ಷರು: ನಾನೇನು ಮಾಡುವುದಕ್ಕಾಗುತ್ತದೆ? ಏನು ಹೇಳುತ್ತೀರಿ ನೋಡಿ ನೀವು.

(ಮಾನ್ಯ ಸದಸ್ಯರಾದ ಶ್ರೀ ಅಂಗಾರರವರು ಸದನದ ಬಾವಿಗೆ ಬಂದು ಧರಣಿನಿರತರಾದರು)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸಚಿವರೆ, ದೊಡ್ಡ ದೊಡ್ಡ ಸಮಸ್ಯೆಯನ್ನು ಬಗೆಹರಿಸುತ್ತೀರಿ. ಈ ಒಂದು ಸಣ್ಣ ವಿಷಯವನ್ನು ಬಗೆಹರಿಸುವುದಕ್ಕಾಗುವುದಿಲ್ಲವೆ?

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ: I am also hurt. These are all small matters. ನಮ್ಮ ಲೆವೆಲ್‌ನಲ್ಲಿ ಪ್ರಯತ್ನವಾಗಿದೆ. ತಾವು ಕೂಡ ಬಂದಿದ್ದೀರಿ. ಸರಿಯೋ ತಪ್ಪೋ ಈಗ ಮಾಡಿರುವ ಜಾಗ ಕೂಡ ಶಾಸಕರ ಕ್ಷೇತ್ರದ್ದೇ. They are your people. ಬೇರೆ ಕ್ಷೇತ್ರಕ್ಕೆ ತೆಗೆದುಕೊಂಡು ಹೋಗಿದ್ದರೆ ನಿಮಗೆ ತೊಂದರೆಯಾಗುತ್ತಿತ್ತು. ಅದೇ ಕ್ಷೇತ್ರದಲ್ಲಿಯೇ ಎರಡು ಕಿ. ಮೀ. ದೂರಕ್ಕೆ ಕಾಲೇಜ್ ಹೋಗಿದೆ. ಅದನ್ನು ಬಿಟ್ಟರೆ ಬೇರೆ ಜಾಗವಿಲ್ಲ. ಯು.ಜಿ.ಸಿ. ಹಣ ವಾಪಸ್ ಹೋಗುತ್ತದೆ. ಈಗ 1 ಕೋಟಿ 23 ಲಕ್ಷ ನಬಾರ್ಡದು ಹಣವಿದೆ. ಅದೂ ಕೂಡ lapse ಆಗುತ್ತದಷ್ಟೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರನ್ನು ಮನವೊಲಿಸಬೇಕು. ಇನ್ನೂ ಇಬ್ಬರು ಸಚಿವರನ್ನು ಮನವೊಲಿಸ ಬೇಕು. ಕಾನೂನು ಸಚಿವರು ಮಧ್ಯಸ್ಥಿಕೆ ವಹಿಸಿ ದಕ್ಷಿಣ ಕನ್ನಡ ಜಿಲ್ಲಾ ಉಸ್ತು ವಾರಿ ಸಚಿವರ ಮನವೊಲಿಸಿ ಈ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನವನ್ನು ಮಾಡಬೇಕು.

ಅಧ್ಯಕ್ಷರು: ಈಗ ಎಲ್ಲವನ್ನೂ ಹೇಳಿದ್ದೀರಿ. ಈಗ ಸಾಕು. ನೀವು ಸಿ.ಎಂ. ರವರನ್ನು ಒಮ್ಮೆ ಭೇಟಿಯಾಗಿ ನೋಡಿ. ಕೃಷ್ಣಪ್ಪನವರೆ, ನಿಮ್ಮ ವಿಷಯ ಪ್ರಸ್ತಾಪ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಸಚಿವರೆ, ಹಿರಿಯ ಸದಸ್ಯರಾದ ಅಂಗಾರರವರು ಸದನದ ಬಾವಿಯಲ್ಲಿ ಧರಣಿಯಲ್ಲಿಯದ್ದಾರೆ. ಅವರಿಗೆ ಈ ವಿಷಯದಲ್ಲಿ ಇನ್ನೊಮ್ಮೆ ಪ್ರಯತ್ನ ಮಾಡುತ್ತೇವೆಂದು ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ: ನೋಡಿ, ಗೌರವಾನ್ವಿತ ವಿರೋಧ ಪಕ್ಷದ ನಾಯಕರನ್ನೇ ಕೇಳಿ, ಹಿಂದೆ ಇದನ್ನು ಪ್ರಸ್ತಾಪ ಮಾಡಿದಾಗಲೇ ತಕ್ಷಣ ಸಭೆಯನ್ನು ಕರೆದು ಎಲ್ಲರನ್ನು ಸಭೆಗೆ ಕರೆದು ಚರ್ಚೆ ಮಾಡಿದ್ದೇನೆ, ಪ್ರೋಸಿಡಿಂಗ್ಸ್ ನೋಡಿ, transparent ಇದೆ. ಅವರ ಹೇಳಿದ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಇದರಲ್ಲಿ ನಮ್ಮದೇನು personal prestige ಇದೆ? ಇಲ್ಲೇ ಇದ್ದರೂ ಅಥವಾ ಅಲ್ಲೇ ಇದ್ದರೂ ಒಟ್ಟಿನಲ್ಲಿ ಮಕ್ಕಳು ಚೆನ್ನಾಗಿ ಓದಿ

ಕಲಿಯಬೇಕೆಂಬುದು ನಮ್ಮ ಉದ್ದೇಶ. ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಹೇಳಿದಾಗ ಈಗ ಅವರು ಕಾಲೇಜ್ ಎಲ್ಲಿ ಇರಬೇಕೆಂದು ಹೇಳುತ್ತಾರೋ ಅಲ್ಲಿಯೂ ಎನೂ ಇಲ್ಲ, ಒಂದು ಪ್ರೈವೇಟ್ ಬಿಲ್ಡಿಂಗ್ ಇದೆ. ಅದು ಸರಿಯಿಲ್ಲ. ಅಲ್ಲಿ ಬೇರೆ ಜಾಗವು ಇರಲಿಲ್ಲ. ಯು.ಜಿ.ಸಿ. ಹಣ ಲ್ಯಾಪ್ಸ್ ಆಯಿತು. ಈಗ 1 ಕೋಟಿ 23 ಲಕ್ಷ ರೂ. ಗಳು ನಬಾರ್ಡದು ಇದೆ. ಈಗ ಅದು ಹೋಗುತ್ತದೆ. ಇಲ್ಲಿ ಜಾಗ ಕೊಡುತ್ತೇವೆಂದು ಹೇಳಿದರು. ಜಾಗವನ್ನು ಕೊಟ್ಟರು, So we shifted. ಹೀಗಾಗಿ ನಾನೇನು ಹೇಳುತ್ತೇನೆಂದರೆ, ಪುನಃ ನಾನು ಜಿಲ್ಲಾ ಸಚಿವರ ಜೊತೆ ಮಾತನಾಡಿ ಇದಕ್ಕೆ ಏನು ಮಾಡುವುದಕ್ಕೆ ಸಾಧ್ಯವಿದೆ ಆ ಬಗ್ಗೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಟಿ. ರವಿ: ನೀವು ಅಲ್ಲಿ ಬಿಲ್ಡಿಂಗನ್ನು ಕಟ್ಟಿಲ್ಲ. ಅಲ್ಲಿ 130 ಮಕ್ಕಳು ಒಂದೇ ಕಡೆ ಇದ್ದಾರೆ.

(ಈ ಹಂತದಲ್ಲಿ ಬಾವಿಯಲ್ಲಿ ನಿಂತು ಧರಣಿ ಮಾಡುತ್ತಿದ್ದ ಮಾನ್ಯ ಅಂಗಾರ ಅವರು ತಮ್ಮ ಸ್ಥಾನಕ್ಕೆ ತೆರಳಿದರು).

ii) ವಿಷಯ: ತುರುವೇಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುಬ್ಬಿ, ಸಿ.ಎಸ್.ಪುರ ಯಡಿಯೂರು ಗ್ರಾಮಗಳ ಮಾರ್ಗವಾಗಿ ಮಂಡ್ಯ ನಗರಕ್ಕೆ ಹೋಗುವ ರಸ್ತೆಯು ಕೆ. ಷಿಪ್ ಯೋಜನೆಯಡಿ ಮಂಜೂರಾಗಿದ್ದರೂ ಕಾಮಗಾರಿಯೂ ಪೂರ್ಣಗೊಳ್ಳದಿರುವ ಬಗ್ಗೆ.

ಶ್ರೀ ಎಂ. ಟಿ. ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ತುರುವೇಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುಬ್ಬಿ, ಸಿ.ಎಸ್.ಪುರ ಯಡಿಯೂರು ಗ್ರಾಮಗಳ ಮಾರ್ಗವಾಗಿ ಮಂಡ್ಯ ನಗರಕ್ಕೆ ಹೋಗುವ ರಸ್ತೆಯು ಕೆ. ಷಿಪ್ ಯೋಜನೆಯಡಿ ಮಂಜೂರಾಗಿದ್ದರೂ ಕಾಮಗಾರಿಯು ಪೂರ್ಣಗೊಳ್ಳದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ಸೆಳೆಯುತ್ತೇನೆ.